
# ಸಂಪಾದಕೀಯ

## ಶ್ರೀರಾಮಕೃಷ್ಣರ ಅಪೂರ್ವ ವ್ಯಕ್ತಿತ್ವ

**ಹ**ತ್ತೊಂಬತ್ತನೆಯ ಶತಮಾನದ ಅಂತ್ಯಭಾಗದಲ್ಲಿ ತಮ್ಮ ದೈವೋನ್ಮತ್ತ ಸಮಾಧಿಗಳಿಂದ ಹಾಗೂ ಸರ್ವಧರ್ಮ ಸಮನ್ವಯ ಸಂದೇಶದಿಂದ ಎಲ್ಲರ ಗಮನ ಸೆಳೆದ ಶ್ರೀರಾಮ ಕೃಷ್ಣ ಪರಮಹಂಸರು ದೇಹವನ್ನು ತ್ಯಜಿಸಿ ನೂರಿಪ್ಪತ್ತು ವರ್ಷ ಗಳು ಕಳೆದಿವೆ. ಅನಂತ ಕಾಲಗರ್ಭದಲ್ಲಿ ಇದು ಬಹಳ ಅಲ್ಪವೇ ಎಂದು ಗಮನಿಸಿದರೆ, ಇಷ್ಟು ಅವಧಿಯಲ್ಲೇ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಇವರನ್ನು ಕುರಿತು ಅದೆಷ್ಟು ಸಾಹಿತ್ಯ ಸೃಷ್ಟಿಯಾಗಿದೆ! ಇವರ ಜೀವನ-ಸಂದೇಶಗಳನ್ನು ಸಾರುವ ಅಸಂಖ್ಯ ಪುಸ್ತಕಗಳು ಅನೇಕ ಭಾಷೆಗಳಲ್ಲಿ ಪ್ರಕಟವಾಗಿವೆ. ಪತ್ರಿಕಾ ಮಾಧ್ಯಮಗಳಲ್ಲಿ ಇವರ ಕುರಿತಾದ ಲೇಖನಗಳು, ಬರಹಗಳು ಬರುತ್ತಲೇ ಇವೆ. ಇವರ ವಿಶಾಲ ಮನೋಭಾವವನ್ನು ಆಧರಿಸಿ ರಾಷ್ಟ್ರಗಳ ನಡುವೆ, ಧರ್ಮಗಳ ನಡುವೆ ಸಾಮರಸ್ಯವನ್ನು ಸಾಧಿಸಬಹುದು ಎಂದು ಅನೇಕ ವಿಚಾರಗೋಷ್ಠಿಗಳಲ್ಲಿ ತೀರ್ಮಾನಿಸಲಾಗಿದೆ. ಅದೆಂತಹ ಸಂಪದ್ಭರಿತ ಜೀವನ ಅವರದು ಎಂದು ವಿಸ್ಮಯವಾಗುತ್ತದೆ! ಲೌಕಿಕ ಶಿಕ್ಷಣವನ್ನೇ ತಿರಸ್ಕರಿಸಿ, ಭೌತಿಕ ಆಸಕ್ತಿಗಳನ್ನೆಲ್ಲ ಬದಿಗೊತ್ತಿ, ಕೇವಲ ಭಗವಂತನ ಕುರಿತಾದ ವಿಚಾರವನ್ನೇ ಮಾತನಾಡುತ್ತಿದ್ದ ವ್ಯಕ್ತಿಯ ಜೀವನದಲ್ಲಿ ಅದೆಂಥ ಸ್ವಾರಸ್ಯ ಇದ್ದಿರಬಹುದು! "ನನಗೆ ಭಗವಂತನನ್ನು ಬಿಟ್ಟು ಬೇರೆ ಏನೂ ತಿಳಿಯದು", ಎಂದು ನಿರ್ಭೀತರಾಗಿ, ಸಂಕೋಚವಿಲ್ಲದೆ ಹೇಳುತ್ತಿದ್ದ ಇವರ ಬಳಿಗೆ ಬಂದವರೆಲ್ಲ ಆಧುನಿಕ ರೀತಿಗಳಲ್ಲಿ ನಿಷ್ಣಾತರಾಗಿದ್ದ ವಿಚಾರವಂತರೇ. ಸ್ಪಷ್ಟವಾದ, ಗೊಂದಲ ಗಳಿಲ್ಲದ, ಸ್ವಂತ ಅನುಭವದಿಂದ ಹೊರಹೊಮ್ಮುತ್ತಿದ್ದ ಇವರ ನುಡಿಗಳನ್ನು ಕೇಳಲು ತವಕಿಸುತ್ತಿದ್ದ ವ್ಯಕ್ತಿಗಳೆಲ್ಲ ಅವರಲ್ಲಿ ಏನನ್ನು ಕಂಡರು? ಅವರ ನಡೆನುಡಿಗಳಲ್ಲಿದ್ದ ಸಾಮರಸ್ಯವನ್ನು, ನುಡಿಗಳಲ್ಲಿನ ಸವಿಯನ್ನು ಹಾಗೂ ನಡೆಯಲ್ಲಿದ್ದ ವಿನಯ ದಿಂದೊಡಗೂಡಿದ ಒಲುಮೆಯನ್ನು.

ಅವರ ಜೀವನದಿಂದ, ವಚನವೇದದಿಂದ ಸ್ಫೂರ್ತಿ ಪಡೆಯುತ್ತಿರುವ ಸಹಸ್ರಾರು ಜನರು ಇಂದಿಗೂ ಇದ್ದಾರೆ. ಅವರ ಜೀವನವನ್ನು, ವಿಚಾರಗಳನ್ನು ಪ್ರತಿಬಾರಿ ಕೇಳಿದಾಗಲೂ, ಓದಿದಾಗಲೂ ಅವುಗಳಲ್ಲಿ ಹೊಸ ಹೊಸ ಆಯಾಮಗಳು, ದರ್ಶನಗಳು ತೆರೆದುಕೊಳ್ಳುತ್ತವೆ. **ಸ್ವಾದು ಸ್ವಾದು ಪದೇ ಪದೇ**—ಪ್ರತಿಯೊಂದು ಹಂತದಲ್ಲಿಯೂ, ಪ್ರತಿಸಾರಿಯೂ ಅದು ಸವಿಯ ಅನುಭವವನ್ನೇ ನೀಡುತ್ತದೆ. ಇದು ಭಾಗವತ ಪುರಾಣ (೧.೧.೧೯) ಹೇಳುವ ಮಾತಾದರೂ ಶ್ರೀರಾಮಕೃಷ್ಣರಿಗೆ ಇದು ಸಮರ್ಪಕವಾಗಿ ಅನ್ವಯಿಸುತ್ತದೆ.



ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣರ ಪವಿತ್ರ ಮೂರ್ತಿ

ಅವರ ಜೀವನವನ್ನು, ವಚನಗಳನ್ನು ಸವಿದಷ್ಟೂ ಅವುಗಳೆಡೆಗಿನ ಆಕರ್ಷಣೆ ಹೆಚ್ಚುತ್ತದೆ.

**ಜೀವನದಲ್ಲಿ ಪ್ರೇರಣೆ**

ಲೌಕಿಕ ವಿಷಯವಸ್ತುಗಳಲ್ಲಿ ಕಾಣುವ ಆಕರ್ಷಣೆ ಈ ಬಗೆಯದಲ್ಲ. ಒಮ್ಮೆ ಸವಿದ ವಸ್ತುವನ್ನು ಮತ್ತೆ ಮತ್ತೆ ಪ್ರತಿನಿತ್ಯವೂ ನಾವು ಸವಿಯಬಯಸುವುದಿಲ್ಲ. ಕಾಲ ಕಳೆದಂತೆಲ್ಲ ವಸ್ತುಗಳಲ್ಲಿನ ನವೀನತೆ ಕಳೆದುಹೋಗುತ್ತದೆ, ನಮ್ಮ ಆಸಕ್ತಿಯೂ ಬದಲಾಗುತ್ತದೆ. ಹೊಸ ಹೊಸ ಅನುಭವವನ್ನೇ ಮಾನವ ಬಯಸುತ್ತಾನೆ. ಆದರೆ ಸತ್ಪುರುಷರ ಜೀವನ ತನ್ನ ಸ್ವಾರಸ್ಯವನ್ನು ಕಳೆದುಕೊಳ್ಳುವುದಿಲ್ಲ. ಪ್ರತಿಯೊಂದು ಪ್ರಾಣಿಯ ಜೀವನವೂ ಅದರಲ್ಲಿರುವ ದೈವತ್ವದ ಅಭಿವ್ಯಕ್ತಿಯಾದ್ದರಿಂದ ಇತರರ ಜೀವನವೂ ನಮ್ಮ ಅಂತರಂಗವನ್ನು ಮುಟ್ಟುತ್ತದೆ. ಸತ್ಪುರುಷರ ಜೀವನದಲ್ಲಿ ಚೈತನ್ಯದ ಅಭಿವ್ಯಕ್ತಿಯು ಗಾಢವೂ, ತೀವ್ರವೂ ಆಗಿದ್ದು, ಅದು ಮಾನಸಿಕ, ಬೌದ್ಧಿಕ ರಸಾಸ್ವಾದನೆ ಗಳಿಗಿಂತ ಭಿನ್ನವಾದ, ಪರಿಪೂರ್ಣವಾದ ಆನಂದ, ಸ್ಫೂರ್ತಿಗಳನ್ನು ನೀಡುತ್ತದೆ. ಸಾಧಕರಿಗೆ ಅದು ನಿರಂತರ ಪ್ರೋತ್ಸಾಹವನ್ನು ನೀಡುವ ಜೀವನದಿ. ಸಹಸ್ರಾರು ವರ್ಷಗಳೇ ಸಂದಿದ್ದರೂ, ಕ್ರಿಸ್ತ, ಬುದ್ಧ, ರಾಮ, ಕೃಷ್ಣ—ಇವರ ಜೀವನದ ಘಟನೆಗಳು ಜನರಿಗೆ ಇಂದಿಗೂ ಪ್ರೇರಣೆ ನೀಡುತ್ತಿವೆ. "ಆತ್ಮವು, ಜಾಗೃತವಾದ ಮತ್ತೊಂದು ಆತ್ಮದಿಂದ ಮಾತ್ರ ಜ್ಯೋತಿಯನ್ನು ಹೊತ್ತಿಸಿಕೊಳ್ಳಬಲ್ಲದು; ಮತ್ತೆಲ್ಲಿಂದಲೂ ಅಲ್ಲ. ನಾವು ಬದುಕಿರುವ ತನಕ ಓದುತ್ತಿರಬಹುದು, ನಾವು ಬಹಳ

ಬುದ್ಧಿವಂತರಾಗಿರಬಹುದು. ಆದರೆ, ಕೊನೆಗೆ ನಮಗೇ ಗೊತ್ತಾಗುವುದು, ಆಧ್ಯಾತ್ಮಿಕ ಜೀವನ ಜಾಗೃತವಾಗಬೇಕಾದರೆ ಅದಕ್ಕೆ ಪ್ರೇರಣೆ ಮತ್ತೊಂದು ಜಾಗೃತವಾದ ಜೀವದಿಂದ ಬರಬೇಕು." (ವಿವೇಕಾನಂದರ ಬೋಧನೆಯ ಸಾರ, ಪು.೭೭).

ಹಾಗಾದರೆ, ಪುಸ್ತಕಗಳಿಂದ ನಮಗಾಗುವ ಪ್ರಯೋಜನ ವೇನು? ಅಸಾಧಾರಣ ವ್ಯಕ್ತಿಗಳ ಜೀವನವನ್ನು ತಿಳಿಸಿಕೊಡುವ ಪುಸ್ತಕಗಳು ನಮ್ಮ ಭಾವನಾಪ್ರಪಂಚವನ್ನು ಜಾಗೃತಗೊಳಿಸ ಬಲ್ಲವು. ಅಂಥ ಓದಿನಿಂದ ಆ ವ್ಯಕ್ತಿಯ ಚಿತ್ರ, ಚರಿತ್ರೆ ನಮ್ಮ ಮನಸ್ಸಿನಲ್ಲಿ ತೋರಿಬಂದು, ಅವುಗಳ ಮೂಲಕ ಮತ್ತೆ ಆತ ನಮ್ಮಲ್ಲಿ ಜೀವಿಸುತ್ತಾನೆ. ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಅನುಭವದ ಮೂಲಕ ಕಂಡುಕೊಂಡಿದ್ದರು, "ಭಾಗವತ, ಭಕ್ತ ಮತ್ತು ಭಗವಾನ್—ಇವು ಮೂರೂ ಒಂದೇ ತತ್ತ್ವ" ಎಂದು. ತಮ್ಮ ನಡೆ, ನುಡಿಗಳ ಮೂಲಕ ಯಾವ ಸತ್ಯವನ್ನು ಇಂತಹವರು ಅಭಿವ್ಯಕ್ತಗೊಳಿಸುವರೋ, ಅದು ಮಾಸುವುದಿಲ್ಲ. ಸತ್ಯವು ಎಂದೆಂದಿಗೂ ಸತ್ಯವೇ. ವಚನವೇದವನ್ನು ಪರಿಚಯಿಸುತ್ತ ಕುವೆಂಪು ಬರೆಯುತ್ತಾರೆ: "ಈ ಮೇರುಕೃತಿ ಮನುಷ್ಯತ್ವ ಇರುವವರೆಗೆ, ಅದು ದೇವತ್ವವನ್ನು ಬಯಸುತ್ತಿರುವವರೆಗೆ ಚಿರಸ್ಥಾಯಿಯಾಗಿ, ಜೀವಂತ ಶಕ್ತಿಯಾಗಿರುತ್ತದೆ. ಕಟ್ಟಡ ಸಂಸ್ಥೆಗಳು ಕಾಲವಶವಾಗಿ ಗತಿಸಬಹುದು; ಸರಸ್ವತಿ ಅಮರೆ!" (ಶ್ರೀರಾಮಕೃಷ್ಣ ವಚನವೇದ, ಭಾಗ–೧, ಪು.vii).

ವಚನವೇದವನ್ನು ಬರೆದ ಮಾಸ್ಟರ್ ಮಹಾಶಯ (ಮಹೇಂದ್ರನಾಥ ಗುಪ್ತ) ಪ್ರಾರಂಭದಲ್ಲಿ ಶ್ರೀಮದ್ಭಾಗವತದಿಂದ (೧೦.೩೧.೯) ಒಂದು ಅರ್ಥಪೂರ್ಣ ಶ್ಲೋಕವನ್ನು ಉದಾಹರಿಸುತ್ತಾರೆ. ಅದರಲ್ಲಿ ಬರುವ **ಶ್ರವಣಮಂಗಲಮ್ ಶ್ರೀಮದಾತತಮ್** ಎಂಬ ಪದಗಳು ವಿಶೇಷವಾಗಿ ಗಮನಾರ್ಹ. ಕೇಳುವುದರಿಂದಲೇ ಮಂಗಳವನ್ನು ಉಂಟುಮಾಡುವ ಈ ನುಡಿಗಳು ಶ್ರೀಮಂತಿಕೆಯಿಂದ ಪಸರಿಸಿವೆ. ಅಂದರೆ ಇದನ್ನು ಯಾರು ಓದಿದರೂ, ಯಾವಾಗ ಓದಿದರೂ ಸ್ವಾರಸ್ಯಮಯವಾಗಿರುತ್ತದೆ. ಯಾವುದೇ ಭಾಗವನ್ನು ಓದಿದರೂ ಅದು ಉಪಯುಕ್ತವೆಂದೆನಿಸುತ್ತದೆ, ಪ್ರೇರಣೆಯನ್ನು ನೀಡುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ, "ಕಲ್ಲುಸಕ್ಕರೆಯನ್ನು ಹೇಗೆ ಸವಿದರೂ ಅದರ ಸಿಹಿಯ ಅನುಭವವಾಗುತ್ತದೆ. ಎಲ್ಲೆಡೆ ಅದು ಸಿಹಿಯಾಗಿಯೇ ಇರುತ್ತದೆ." ಅತ್ಯಂತ ಸಮರ್ಪಕವಾಗಿ, ಸಮರ್ಥವಾಗಿ ಶ್ರೀರಾಮಕೃಷ್ಣರನ್ನು ಪರಿಚಯಿಸುವ **ವಚನವೇದ**ದ ಮೂಲಕ ಅವರ ಜೀವನದ ವೈಶಿಷ್ಟ್ಯ ಎದ್ದುಕಾಣುತ್ತದೆ. ಅದರಲ್ಲಿನ ಸಂಭಾಷಣೆಗಳ ಮೂಲಕ ಅವರ ಅಪೂರ್ವ ವ್ಯಕ್ತಿತ್ವದ ಪರಿಚಯವಾಗುತ್ತದೆ. ವಿದ್ವಾಂಸರ ಕೆಲವು ಪ್ರಬಂಧಗಳಂತೆ ನೀರಸವೂ, ಕೆಲವು ಪ್ರವಚನಗಳಂತೆ ಜಡವೂ ಅಲ್ಲದೆ ಜೀವಕಳೆಯಿಂದ ತುಂಬಿರುವ ಈ ಗ್ರಂಥದಿಂದ ನಮಗೆ ವೇದ್ಯವಾಗುವ ಶ್ರೀರಾಮಕೃಷ್ಣರ ಅತಿ ಮುಖ್ಯ ಅಂಶವೇ ಅವರ ಅಕೃತ್ರಿಮ ನಡವಳಿಕೆ. ಇದು ಹೇಗೆ ಇಂದಿನ ದಿನಗಳಿಗೆ ಪ್ರಸ್ತುತವೆಂಬುದನ್ನು ತಿಳಿಯುವುದು ಆವಶ್ಯಕ.

**ಭಾರತೀಯ ದರ್ಶನದ ವಿಶೇಷತೆ**

ಪ್ರತಿಯೊಬ್ಬ ಮನುಷ್ಯನೂ ದಾರ್ಶನಿಕನೇ. ಜೀವನದ ಬಗ್ಗೆ ಅವನು ತನ್ನದೇ ಆದಂತಹ ನಿಲುವನ್ನು ಹೊಂದಿರುತ್ತಾನೆ. ಜೀವನದ ಅರ್ಥ ಹಾಗೂ ಉದ್ದೇಶವನ್ನು ತಿಳಿಯುವ ಪ್ರಯತ್ನ, ಕಾಣುವ ವೈವಿಧ್ಯತೆಯ ಹಿನ್ನೆಲೆಯಲ್ಲಿರುವ ಸಮಾನಸೂತ್ರದ ಅನ್ವೇಷಣೆ, ಪ್ರಗತಿಯೊಂದಿಗೆ ಶಾಂತಿ, ಸಾಮರಸ್ಯಗಳನ್ನು ಸಾಧಿಸುವ ಬಯಕೆ—ಇವೆಲ್ಲ ಅನಾದಿ ಕಾಲದಿಂದಲೂ ಮಾನವನ ಜೀವನವನ್ನು ರೂಪಿಸುತ್ತಿರುವ ಅಂಶಗಳು. ಮಾನವನು ಒಂದಲ್ಲ ಒಂದು ರೀತಿಯಲ್ಲಿ ಇವುಗಳಿಗೆ ಸಮಂಜಸವಾದ ಉತ್ತರಗಳನ್ನು ಪಡೆದುಕೊಳ್ಳಲು ಬಯಸುತ್ತಾನೆ. ಬುದ್ಧಿಯ ಬೆಳವಣಿಗೆಯೊಂದಿಗೆ ಸ್ವಾಭಾವಿಕವಾಗಿಯೇ ಕಂಡುಬರುವ ಈ ದಾರ್ಶನಿಕ ಮನೋಭಾವವನ್ನು ಅಲ್ಲಗಳೆಯುವಂತಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ದರ್ಶನಶಾಸ್ತ್ರವು ಕ್ರಿಯಾತ್ಮಕವಲ್ಲದ ತರ್ಕ ಹಾಗೂ ಚರ್ಚೆಗಳಿಗೆ ಮಾತ್ರ ಸೀಮಿತವಾಗಿದ್ದರೆ, ಪೂರ್ವ ದೇಶಗಳಲ್ಲಿ ಸತ್ಯದ ಅನುಭವಕ್ಕೆ ಪ್ರಾಶಸ್ತ್ಯ ನೀಡಲಾಯಿತು.ತರ್ಕಕ್ಕೆ ನಿಲುಕದ ಆಧ್ಯಾತ್ಮಿಕ ಅನುಭವಗಳೆಡೆಗೆ, ಜೀವನದ ಪ್ರಗತಿಯಲ್ಲಿ ಅಸಾಧ್ಯ ಪರಿಣಾಮವನ್ನು ಹೊಂದಿರುವ ಮನಸ್ಸಿನ ಆಯಾಮಗಳೆಡೆಗೆ ಪಶ್ಚಿಮದ ಚಿಂತಕರು ದೃಷ್ಟಿ ಹಾಯಿಸದೆ, ಹೊರಗಿನ ಪ್ರಪಂಚದಲ್ಲಿನ ವಿದ್ಯಮಾನಗಳನ್ನು ವಿಶ್ಲೇಷಿಸಿದರು. ವಸ್ತುನಿಷ್ಠವಾದ ಅಧ್ಯಯನಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆತು ವ್ಯಕ್ತಿಯ ಜೀವನ ಹಾಗೂ ಅನುಭವಗಳಿಗೆ ಪ್ರಮುಖವಾಗಿ ಅನ್ವಯಿಸದ ಸಿದ್ಧಾಂತಗಳು ಮೂಡಿದವು. ಭಾರತೀಯ ಪರಂಪರೆಯಲ್ಲಿ ಮೊದಲಿನಿಂದಲೂ ಅನುಭವಕ್ಕೆ ಪ್ರಾಧಾನ್ಯತೆಯನ್ನು ನೀಡಲಾಗಿದೆ. **ವೇದಾಹಮೇತಂ ಪುರುಷಂ ಮಹಾಂತಂ**—ಮಹತ್ತಾದ, ಅತ್ಯುತ್ತಮವಾದ ಆ ಪರಮಪುರುಷನನ್ನು ನಾನು ತಿಳಿದಿರುವೆ ಎಂಬಂತಹ ಅನುಭವದಿಂದ ಹೊರಹೊಮ್ಮಿದ ನುಡಿಗಳು ಇಲ್ಲಿ ವಿಪುಲವಾಗಿವೆ.

ಜೀವನವನ್ನು ಸಮಗ್ರವಾಗಿ ಪರಿಶೀಲಿಸುವ ಭಾರತದ ದರ್ಶನವು ಮನುಷ್ಯನ ಎಲ್ಲ ಸಾಧ್ಯತೆಗಳಿಗೂ ಅವಕಾಶ ಕಲ್ಪಿಸುತ್ತದೆ. ಹಗಲುಗನಸು ಕಾಣುವ ಅಪ್ರಯೋಜಕ ಊಹಾಪೋಹಗಳನ್ನಾಗಲಿ, ಬುದ್ಧಿಯ ಕಸರತ್ತನ್ನು ತೋರಿಸುವ ತರ್ಕವನ್ನಾಗಲಿ ಭಾರತದ ದರ್ಶನಶಾಸ್ತ್ರವು ಪ್ರಧಾನವೆಂದು ಒಪ್ಪುವುದಿಲ್ಲ. ಆದ್ದರಿಂದಲೇ ಅದನ್ನು ದರ್ಶನವೆಂದು ಕರೆದದ್ದು. ಛಾಂದೋಗ್ಯ ಉಪನಿಷತ್ತಿನಲ್ಲಿ ಕಂಡುಬರುವ ನಾರದ

ಮಹರ್ಷಿಯ ಮಾತುಗಳು ಇದಕ್ಕೆ ನಿದರ್ಶನ. ಎಲ್ಲ ಶಾಸ್ತ್ರಗಳನ್ನೂ ಓದಿ ಪಾಂಡಿತ್ಯವನ್ನು ಗಳಿಸಿದ್ದರೂ ಆಧ್ಯಾತ್ಮಿಕ ಅನುಭವದಿಂದ ಉಂಟಾಗುವ ಮನಶ್ಶಾಂತಿಯಿಲ್ಲದೆ ಬಳಲುವ ನಾರದ ಹೇಳುತ್ತಾನೆ: **ಸೋಽಹಂ ಭಗವೋ ಮಂತ್ರವಿದೇಽವಾಸ್ಮಿ ನಾತ್ಮವಿಚ್ಛ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಸ್ತರತಿ ಶೋಕಮಾತ್ಮವಿದಿತಿ ಸೋಽಹಂ ಭಗವಃ ಶೋಚಾಮಿ ತಂ ಮಾ ಭಗವಾಂಛೋಕಸ್ಯ ಪಾರಂ ತಾರಯತ್ವಿತಿ ತಂ ಹೋವಾಚ ಯದ್ವೈ ಕಿಂಚೈತದಧ್ಯಗೀಷ್ಠಾ ನಾಮೈವೈತತ್** (೭-೧-೩) "ಸನತ್ಕುಮಾರ ಮಹರ್ಷಿಗಳೇ! ನಾನು ಮಂತ್ರವನ್ನು ಮಾತ್ರ ಅರಿತುಕೊಂಡಿರುತ್ತೇನೆ, ಆತ್ಮನನ್ನು ಅರಿತುಕೊಂಡಿಲ್ಲ. ಆತ್ಮನನ್ನು ಅರಿತುಕೊಂಡಿರುವವನು ಶೋಕವನ್ನು ದಾಟುತ್ತಾನೆಂದು ನಾನು ತಮ್ಮಂತಹವರಿಂದ ಕೇಳಿದ್ದೇನೆ. ನಾನು ಶೋಕಾರ್ತನಾಗಿದ್ದೇನೆ; ನನ್ನನ್ನು ಈ ಶೋಕದಿಂದ ಪಾರುಮಾಡಿ." ಸನತ್ಕುಮಾರರು ಹೇಳುತ್ತಾರೆ, "ನೀನು ಏನೇನನ್ನು ಅಧ್ಯಯನ ಮಾಡಿರುತ್ತೀಯೋ ಅವೆಲ್ಲ ಬರೀ ಹೆಸರಿಗೆ ಮಾತ್ರ."

### ಎಲ್ಲವೂ ಧರ್ಮಮಯ

ಭಾರತೀಯ ಪರಂಪರೆಯು ಸತ್ಯದ ಅನ್ವೇಷಣೆಯ ಜೊತೆಗೆ ನೈತಿಕ ಹಾಗೂ ಪರಿಶುದ್ಧ ಆಧ್ಯಾತ್ಮಿಕ ಜೀವನಕ್ಕೆ ಪ್ರಾಶಸ್ತ್ಯವನ್ನು ನೀಡುತ್ತದೆ. ತ್ಯಾಗ, ನಿಗ್ರಹ, ಅಹಂಕಾರ ರಾಹಿತ್ಯಗಳು ಅನ್ವೇಷಕನಲ್ಲಿರಬೇಕಾದ ಗುಣಗಳು ಎಂದು ತಾತ್ತ್ವಿಕ, ವೈಚಾರಿಕ ಗ್ರಂಥಗಳು ಮೊದಲೇ ತಿಳಿಸುತ್ತವೆ. ಜೀವನದಲ್ಲಿ ವ್ಯಕ್ತವಾಗದ ತತ್ತ್ವವಿಚಾರಗಳನ್ನು ಶ್ರೀರಾಮಕೃಷ್ಣರು ಒಪ್ಪುತ್ತಿರಲಿಲ್ಲ. ತಮ್ಮ ಪ್ರತಿಯೊಂದು ನಡೆ, ನುಡಿಯಲ್ಲೂ ಸತ್ಯವನ್ನು, ಪಾರದರ್ಶಿತ್ವವನ್ನು ಕಾಪಾಡಿಕೊಂಡು ಬರುತ್ತಿದ್ದ ಅವರು ಶುದ್ಧ ಚಾರಿತ್ರ್ಯದ ಬಗ್ಗೆ ಬಹಳ ಎಚ್ಚರಿಕೆ ವಹಿಸುತ್ತಿದ್ದರು. ತಮ್ಮ ಶಿಷ್ಯರಲ್ಲೂ ಅದು ಇರಬೇಕು ಎಂದು ಅದರ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಒಮ್ಮೆ ತನ್ನ ವಿಷಯಲೋಲುಪತೆಯನ್ನು, "ಎಲ್ಲವೂ ಬ್ರಹ್ಮವೇ ಆಗಿರುವುದರಿಂದ ದೋಷವೆಲ್ಲಿಯದು" ಎಂದು ವೇದಾಂತಿಯ ಸೋಗಿನಲ್ಲಿ ಸಮರ್ಥಿಸಿಕೊಳ್ಳುತ್ತಿದ್ದ ಒಬ್ಬನ ಮಾತು ಬಂದಾಗ ಶ್ರೀರಾಮಕೃಷ್ಣರು ಅಸಹ್ಯವನ್ನು ವ್ಯಕ್ತಪಡಿಸಿದರು: "ಅದೆಂತಹ ವೇದಾಂತ? ಅಂತಹ ವೇದಾಂತವನ್ನು ನಾನು ಥೂಕರಿಸುತ್ತೇನೆ. ಅಂತಹ ವೇದಾಂತಕ್ಕೆ ಧಿಕ್ಕಾರವಿರಲಿ! ಕೇವಲ ಮಾತಿನಲ್ಲಿ ವಿಚಾರವಿದ್ದರೆ ಸಾಲದು, ಅದು ಆಚರಣೆಯಲ್ಲಿ ಬರಬೇಕು." ಕ್ರಿಯಾಶೀಲವಾದ ಆಧ್ಯಾತ್ಮಿಕತೆಯೇ ಭಾರತದ ವೈಶಿಷ್ಟ್ಯವೆಂದು ಡಾ. ರಾಧಾಕೃಷ್ಣನ್ ಹೇಳುತ್ತಾರೆ. ಭಾರತೀಯ ದರ್ಶನಗಳ ಸಮ್ಮೇಳನದ (Indian Philosophical Congress) ರಜತಮಹೋತ್ಸವದ ಸಂದರ್ಭದಲ್ಲಿನ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಹೀಗೆ ಹೇಳಿದರು: "ಮಾನವನ ಜೀವನದಲ್ಲಿ ಅನುಷ್ಠಾನಕ್ಕೆ ಬಾರದ ಸತ್ಯವನ್ನು ಭಾರತ ಎಂದಿಗೂ ಒಪ್ಪುವುದಿಲ್ಲ. ಸತ್ಯದ ಸೂಕ್ಷ್ಮತೆಯನ್ನು ಗ್ರಹಿಸುವ ಮಾನವನೇ ನಮಗೆ ಬೇಕು, ಕೇವಲ ವಿಚಾರಗಳಲ್ಲ, ಸಿದ್ಧಾಂತಗಳಲ್ಲ." ಶ್ರೀರಾಮಕೃಷ್ಣರು ಧರ್ಮವನ್ನು ಜೀವನದ ಯಾವುದೋ ಒಂದು ಕ್ರಿಯೆಯಾಗಿ ಕಾಣದೆ ಅದನ್ನೇ ಸಮಗ್ರ ಜೀವಾಳವಾಗಿಸಿಕೊಂಡರು. ದೇವಸ್ಥಾನದ ಪೂಜೆಯು ಅವರಿಗೆ ಒಂದು ವೃತ್ತಿಯಾಗಿರದೆ, ಅವರ ಜೀವನದ ಒಂದು ಅವಿಭಾಜ್ಯ ಸಂಬಂಧವಾಗಿತ್ತು. ಅಂತೆಯೇ ಎಲ್ಲ ದೈನಂದಿನ ಕ್ರಿಯೆಗಳೂ ಪ್ರತ್ಯೇಕ ಘಟನೆಗಳಾಗಿರದೆ ಅವರ ಅನುಭಾವವನ್ನು ವ್ಯಕ್ತಪಡಿಸುವ ಪ್ರಸಂಗಗಳಾಗಿದ್ದವು. ಧರ್ಮವು ಆಚರಣೆಯಲ್ಲಿದೆ ಎಂಬುದನ್ನು ಅವರು ತಮ್ಮ ಪ್ರತಿಯೊಂದು ನಡೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಇದೇ ಭಾವನೆಯನ್ನು ಆಧಾರವಾಗಿರಿಸಿಕೊಂಡು ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಧರ್ಮವು ನಿತ್ಯಜೀವನಕ್ಕೆ ಇಳಿದು ಬರುವಂತೆ ಮಾಡಬೇಕು. ಧರ್ಮವನ್ನು ಅನುಷ್ಠಾನಕ್ಕೆ ತಂದು ನೆರೆಹೊರೆಯವರಿಗೆ ವೇದಾಂತ ತತ್ತ್ವವನ್ನು ಬೋಧಿಸಿದರೆ ಪೌರಸ್ತ್ಯ ಮತ್ತು ಪಾಶ್ಚಾತ್ಯ ದೇಶಗಳೆಲ್ಲವೂ ಹೇರಳವಾಗಿ ಲಾಭವನ್ನು ಪಡೆಯುವುವು" (ಬೋಧನೆಯ ಸಾರ, ಪು. ೧೧೧; ೧೨).

### ಮಾನವಕೇಂದ್ರಿತ ಧರ್ಮ

ಶ್ರೀರಾಮಕೃಷ್ಣರು ಮಾನವನನ್ನು ಧರ್ಮದ ಕೇಂದ್ರದಲ್ಲಿರಿಸಿದರು. ಬಡಬಗ್ಗರ ದುಃಖವನ್ನು ಕಂಡು ನೊಂದು "ಪ್ರತ್ಯಕ್ಷವಾಗಿ ಕಾಣುವ ದೇವರು ಇವರು", ಎಂದು ಮಥುರನಾಥನಿಗೆ ಹೇಳುತ್ತ ಹೊಸ ದೃಷ್ಟಿಯ ಮಾನವ ಸೇವೆಯನ್ನು ಬೋಧಿಸಿದರು. ಅದನ್ನೇ ಆಚರಣೆಗೆ ತರುವಂತೆ ಶಿಷ್ಯರ ಮನವೊಲಿಸಿದರು. ಯಾರಿಗಾದರೂ ಕಿಂಚಿತ್ ಸಹಾಯವಾಗುವುದಾದರೆ ಯಾವುದೇ ಹಿಂಜರಿಕೆಯಿಲ್ಲದೆ ಅವರಿಗೆ ಹಿತನುಡಿಗಳನ್ನು ಹೇಳುತ್ತಿದ್ದರು. ಮಾನವರು ಕಷ್ಟದಿಂದ ಸಂಸಾರವನ್ನು ನಡೆಸುತ್ತಿರುವುದನ್ನು ಕಂಡು ಮರುಗುತ್ತಿದ್ದರು. ಜೀವನದಲ್ಲಿ ಬೇಸತ್ತವರಿಗೆ ಶಾಂತಿ ನೀಡುವ ಮಾರ್ಗವನ್ನು ಬೋಧಿಸಬೇಕು ಎಂಬ ತೀವ್ರ ಕಾಳಜಿಯನ್ನು ಶ್ರೀಮಾತೆಗೆ, ಶಿಷ್ಯರಿಗೆ ತಿಳಿಸಿ ತನ್ಮೂಲಕ ಮಾನವಕೇಂದ್ರಿತ ಧರ್ಮಕ್ಕೆ ಚಾಲನೆ ನೀಡಿದರು. ಧರ್ಮವು ಮನುಷ್ಯನ ಸಮಸ್ಯೆಗಳಿಗೆ ಪರಿಹಾರ ಒದಗಿಸದೆ, ಕೇವಲ ಪಾರಮಾರ್ಥಿಕ ತತ್ತ್ವಗಳನ್ನೇ ಬೋಧಿಸಿದರೆ ಅದರಿಂದ ಏನು ಪ್ರಯೋಜನವಾದೀತು? "ಹಾಲನ್ನು ಕುರಿತು ಕೇಳಿದರಲ್ಲ, ವಿಚಾರಣೆ ಮಾಡಿದರಲ್ಲ. ಅದನ್ನು ಸವಿಯಬೇಕು. ಮಾವಿನ ಹಣ್ಣನ್ನು

ತಿನ್ನಬೇಕು. ಎಲೆ. ರೆಂಬೆಗಳನ್ನು ಎಣಿಸುವುದು ಸಲ್ಲ" ಎನ್ನುತ್ತಿದ್ದರು. ಪ್ರಸ್ತುತ ಭಾರತದಲ್ಲಿ ನಾವು ಕಾಣುತ್ತಿರುವ ಧಾರ್ಮಿಕ ಸೇವಾಕಾರ್ಯಗಳೆಲ್ಲ ಈ ಉಪದೇಶದ ಅಭಿವ್ಯಕ್ತಿಯೇ ಎಂದರೆ ಅತಿಶಯೋಕ್ತಿಯಾಗಲಾರದು. ಎಲ್ಲರಲ್ಲಿಯೂ ಸಚ್ಚಿದಾನಂದದ ಒಂದಂಶ ಜೀವಾತ್ಮನಾಗಿರುವುದು, ಅಂತರಾತ್ಮನಾಗಿ ಭಗವಂತನೇ ಎಲ್ಲರಲ್ಲಿಯೂ ನೆಲೆಸಿದ್ದಾನೆ ಎಂಬ ವಿಚಾರಗಳೆಲ್ಲ, ಅನುಷ್ಠಾನಕ್ಕೆ ಬಾರದೆ, ಕೇವಲ ಸಿದ್ಧಾಂತಗಳಾಗಿದ್ದ ಹಿಂದೂಧರ್ಮದಲ್ಲಿ ಸೇವಾಕಾರ್ಯಗಳಿಗೆ ಪ್ರಾಧಾನ್ಯತೆಯಿರಲಿಲ್ಲ. ಧರ್ಮವೆಲ್ಲ ಕೇವಲ ದೇವಸ್ಥಾನಗಳಿಗೆ, ಮನೆಯ ನಾಲ್ಕು ಗೋಡೆಗಳೊಳಗೆ ಸೀಮಿತವಾಗಿತ್ತು. ಬಾಹ್ಯಪ್ರಪಂಚವು ಮಿಥ್ಯೆ; ಕರ್ಮ ಅಥವಾ ಕ್ರಿಯೆಗಳೆಲ್ಲ ಲೌಕಿಕ, ಅದರಿಂದ ಬಂಧನವೇ ಉಂಟಾಗುವುದು ಎಂಬ ಭ್ರಾಂತಿಯಿಂದ ಹುಟ್ಟಿದ್ದ ಭೀತಿಯನ್ನು ಶ್ರೀರಾಮಕೃಷ್ಣರು ಹೋಗಲಾಡಿಸಿದರು. ಭಕ್ತರ ಮನೆಗಳಿಗೆ ಭೇಟಿಯಿತ್ತು ಅವರ ಆಧ್ಯಾತ್ಮಿಕ ಜೀವನದ ಬಗ್ಗೆ, ದೈನಂದಿನ ಕಷ್ಟಸುಖಗಳ ಬಗ್ಗೆ ಸ್ಪಂದಿಸುತ್ತಿದ್ದ ಶ್ರೀರಾಮಕೃಷ್ಣರು ಶುಷ್ಕಯೋಗಿಯಾಗಿರದೆ, ಪ್ರೇಮಮಯರಾಗಿದ್ದರು. ಇದು ಅವರು ಧರ್ಮಕ್ಕೆ ನೀಡಿದ ಮಾನವೀಯ ತಿರುವು, ಹೃದಯವಂತಿಕೆಯ ಬೆಡಗು.

**ಸತ್ಯವೇ ಕಲಿಯುಗದ ತಪಸ್ಸು**

ಶ್ರೀರಾಮಕೃಷ್ಣರ ಸತ್ಯನಿಷ್ಠೆ ಅಪೂರ್ವವಾದುದು. ತಮ್ಮ ಮಾತುಗಳನ್ನು ಉಳಿಸಿಕೊಳ್ಳಲು ಕೆಲವೊಮ್ಮೆ ಮಧ್ಯರಾತ್ರಿಯಾಗಿದ್ದರೂ ಭಕ್ತರ ಮನೆಗಳಿಗೆ ಹೋಗಿದ್ದುಂಟು. ತಮ್ಮ ಒಂದು ಮಾತು, ನಡತೆ ಸುಳ್ಳಾದರೆ ಇಡೀ ಜೀವನದ ಸಾಧನೆಗಳು, ಅನುಭವಗಳು ಎಲ್ಲವೂ ತಮ್ಮ ಸತ್ಯವನ್ನು ಕಳೆದುಕೊಂಡುಬಿಡುತ್ತವೆ ಎಂಬ ಬೋಧೆ ಅವರಿಗಿತ್ತು. "ಇಂಥ ದಿನ ಇಂಥ ಸಮಯದಲ್ಲಿ ಬರುತ್ತೇನೆಂದು ಹೇಳಿದರೆ ಅವರು ಆ ದಿನ ಅದೇ ಸಮಯಕ್ಕೆ ಸರಿಯಾಗಿ ಅಲ್ಲಿರುತ್ತಿದ್ದರು. ಯಾರಿಂದಲಾದರೂ ಯಾವುದೋ ಒಂದು ವಸ್ತುವನ್ನು ಪಡೆಯುತ್ತೇನೆಂದು ಹೇಳಿದರೆ ಅವರಿಂದ ಹೊರತು ಬೇರೆಯವರಿಂದ ಅದನ್ನು ಅವರು ಸ್ವೀಕರಿಸುತ್ತಿರಲಿಲ್ಲ. ಇನ್ನು ಈ ವಸ್ತುವನ್ನು ತಿನ್ನುವುದಿಲ್ಲ ಅಥವಾ ಈ ಕಾರ್ಯವನ್ನು ಮಾಡುವುದಿಲ್ಲ ಎಂದು ಹೇಳಿದರೆ ಮತ್ತೆ ಎಂದೂ ಅದನ್ನು ತಿನ್ನುತ್ತಿರಲಿಲ್ಲ, ಅಥವಾ ಆ ಕಾರ್ಯವನ್ನು ಮಾಡುತ್ತಿರಲಿಲ್ಲ" (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಪು.೩೮೦).

ವ್ಯಕ್ತಿಗಳ ಬಗ್ಗೆ ಸಂಶಯ ಪಡುವುದಾಗಲಿ, ಅಸೂಯೆ, ದ್ವೇಷಗಳನ್ನು ವ್ಯಕ್ತಪಡಿಸುವುದಾಗಲಿ ಶ್ರೀರಾಮಕೃಷ್ಣರಲ್ಲಿ ಇರಲಿಲ್ಲ. ನೈತಿಕತೆಯ ಬಗ್ಗೆ ಎಚ್ಚರದಿಂದಿರುತ್ತಿದ್ದ ಅವರು ಶಿಷ್ಯರಿಗೂ ಅದನ್ನು ತಮ್ಮ ಆಚರಣೆಯ ಮೂಲಕ ತೋರಿಸಿಕೊಡುತ್ತಿದ್ದರು. ಸ್ವಾಮಿ ಪ್ರೇಮಾನಂದರು ಹೇಳಿರುವ ಈ ಘಟನೆ ಇದಕ್ಕೆ ನಿದರ್ಶನ. 'ಒಂದು ದಿನ ರಾತ್ರಿಯ ಹೊತ್ತಿನಲ್ಲಿ ಶ್ರೀರಾಮಕೃಷ್ಣರಿಗೆ ಗುಡುಗುಡಿಗಾಗಿ ಕೆಂಡದ ಆವಶ್ಯಕತೆಯಿತ್ತು. ಅವರ ಕೋಣೆಯ ಪಕ್ಕದಲ್ಲಿದ್ದ ಪಡಸಾಲೆಯಲ್ಲಿ ಒಂದು ಮಡಕೆಯಲ್ಲಿರುತ್ತಿದ್ದ ಕೆಂಡವನ್ನು ನಾನು ತರಲು ಹೋದೆ. ತಡವಾಗಿ ಬಂದಾಗ ವಿಳಂಬಕ್ಕೆ ಕಾರಣವನ್ನು ಕೇಳಿದರು. 'ಅಲ್ಲಿ ಹಾಜರಾ ಮತ್ತು ರಾಖಾಲ ಮಾತನಾಡುತ್ತಿದ್ದರು. ತಮ್ಮಿಂದ ಜೋರು ಮಾಡಿ, ಏನಾದರೂ ಪಡೆದುಕೊಳ್ಳುವಂತೆ ಹಾಜರಾ ರಾಖಾಲನಿಗೆ ಹೇಳಿಕೊಡುತ್ತಿದ್ದ', ಎಂದು ನಾನು ವರದಿ ಒಪ್ಪಿಸಿದೆ. 'ಹೌದೇ, ಇರು. ಅವರು ಏನು ಮಾತನಾಡುತ್ತಿರುವರು ಎಂದು ಕೇಳೋಣ', ಎನ್ನುತ್ತ ಕಾಲನ್ನು ಮುಂದಿಡಲು ಪ್ರಯತ್ನಿಸಿ ವಿಫಲರಾದರು. 'ಕದ್ದು ಕೇಳುವುದು ಸರಿಯಲ್ಲ' ಎನ್ನುತ್ತ ಮತ್ತೆ ಕುಳಿತುಕೊಂಡರು" (*Swami Premananda, Love Incarnate*, Advaita Ashrama, p. 36). ನೈತಿಕತೆಯು ಅವರ ವ್ಯಕ್ತಿತ್ವದೊಂದಿಗೆ ಅದೆಷ್ಟು ಸಮರಸಗೊಂಡಿತ್ತು ಎಂದರೆ ತಪ್ಪು ಕೆಲಸವನ್ನು ಮಾಡುವುದು ಅವರಿಂದ ಸಾಧ್ಯವೇ ಇರಲಿಲ್ಲ. ದೇಹವೇ ಪ್ರತಿಭಟಿಸುತ್ತಿತ್ತು! "ತಾಯಿ, ನಾನು ತಪ್ಪು ದಾರಿಯಲ್ಲಿ ನಡೆಯದಂತೆ ರಕ್ಷಿಸುತ್ತಿದ್ದಾಳೆ", ಎಂದು ಅವರು ಮಗುವಿನಂತೆ ಸರಳವಾಗಿ ಇದನ್ನು ವ್ಯಾಖ್ಯಾನಿಸುತ್ತಿದ್ದರು.

ಶ್ರೀರಾಮಕೃಷ್ಣರ ದಿವ್ಯಜೀವನದಿಂದ ನಿರಂತರವಾಗಿ ಸ್ಫೂರ್ತಿಯನ್ನು ಪಡೆಯಬಹುದು. ಎಂದಿಗೂ ಬತ್ತದ ಸೆಲೆ, ಅನರ್ಘ್ಯ ರತ್ನಗಳ ಖನಿ ಅವರ ಜೀವನ. ಅದನ್ನು ಕುರಿತು ಪರಿಭಾವಿಸುವುದು ಒಂದು ವಿಧವಾದ ಧ್ಯಾನವೇ ಆಗುತ್ತದೆ. ಭಾಗವತ ಪುರಾಣದಲ್ಲಿ ಇದನ್ನು ಲೀಲಾಧ್ಯಾನವೆಂದೇ ಕರೆಯಲಾಗಿದೆ. ಧ್ಯಾನದಲ್ಲಿ ನಮ್ಮ ಮನಸ್ಸಿನ ಶೋಧ ನಡೆಯುತ್ತದೆ. ಮನಸ್ಸಿನ ವಿವಿಧ ಸ್ತರಗಳ ಅರಿವು ಮೂಡುವುದು ಧ್ಯಾನದಲ್ಲಿ. ಅಂತಹ ಸಮಯದಲ್ಲಿ ಉದಾತ್ತ ಚೇತನಗಳ ಜೀವನದ ಅಂಶಗಳನ್ನು ಕುರಿತು ಆಲೋಚನೆ ಮಾಡಿದಾಗ ಅವು ನಮ್ಮಲ್ಲಿರುವ ಸ್ವಭಾವಸಹಜವಾದ ಸ್ವಾರ್ಥ, ಅಸೂಯೆಗಳಂತಹ ಸಂಕುಚಿತ ಅವಗುಣಗಳನ್ನು ಗೆಲ್ಲುವಲ್ಲಿ ಸಹಕಾರಿಯಾಗುತ್ತವೆ. ಹೊಸ ನೀರು ಹಳೆಯ ಕಲ್ಮಷವನ್ನೆಲ್ಲ ತೊಳೆಯುವಂತೆ ನಮ್ಮ ವ್ಯಕ್ತಿತ್ವವೂ ತಿಳಿಯಾಗಿ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕಾಣುವಂತಾಗುತ್ತದೆ. ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನದ ಅಂಗವಾಗಿ ಈ ಸಂಚಿಕೆಯಲ್ಲಿ ಅವರ ಜೀವನದ ವಿಭಿನ್ನ ಆಯಾಮಗಳನ್ನು ನಿಮ್ಮ ಮುಂದಿಟ್ಟಿದ್ದೇವೆ. ಇವುಗಳನ್ನು ಓದುವುದರ ಮೂಲಕ, ಮನನ ಮಾಡುವುದರ ಮೂಲಕ, ಸಾಧನೆಯಲ್ಲಿ ಹೊಸ ಉತ್ಸಾಹ, ಭರವಸೆಯನ್ನು ಕಂಡುಕೊಳ್ಳೋಣ.